# ಜೀವನದಲ್ಲಿ ಸ್ಫೂರ್ತಿ ಬೇಕೆ? ಹೀಗೆ ಮಾಡಿ

ನಮ್ಮ ಇಂದಿನ ಯುವಕರಿಗೆ ಸ್ಫೂರ್ತಿ ತುಂಬಬಲ್ಲ, ನವ ಚೇತನ ನೀಡಬಲ್ಲ ಸಂಗತಿಗಳು ನಮ್ಮ ದೇಶದಲ್ಲಿ ಇಲ್ಲವೆ? ನಮಗೆ ಆದರ್ಶ, ಮಾದರಿ, ಪ್ರೇರಣೆಗಳು ಪಾಶ್ಚಾತ್ಯರಿಂದಲೇ ಬರಬೇಕೆ? ಇಂದಿನ ಯುವಕ-ಯುವತಿಯರು ಪಶ್ಚಿಮದ, ವಿಶೇಷವಾಗಿ ಅಮೆರಿಕದ ಸಂಸ್ಕೃತಿಗೆ ಮಾರುಹೋಗುತ್ತಿರುವ ರೀತಿಯನ್ನು ಕಂಡಾಗ, ಅವರ ಜೀವನಕ್ರಮ ಸಂಪೂರ್ಣ ಬದಲಾಗುತ್ತಿರುವುದನ್ನು ಗಮನಿಸಿದಾಗ ಈ ಸಂದೇಹ ನಮ್ಮಲ್ಲಿ ಮೂಡುವುದು.

ಕೇವಲ ನಮ್ಮ ಯುವಕರಿಗಷ್ಟೇ ಅಲ್ಲ, ಪ್ರಪಂಚದ ಎಲ್ಲ ಜನಾಂಗದ ಯುವಕರಿಗೂ ಸ್ಫೂರ್ತಿ ನೀಡಬಲ್ಲ, ಅವರ ಜೀವನಕ್ಕೆ ಅರ್ಥ ಕಾಣಿಸಬಲ್ಲ ಅದ್ಭುತ ಸಂಗತಿಗಳು ನಮ್ಮ ದೇಶದ ಇತಿಹಾಸ, ಸಂಸ್ಕೃತಿ ಹಾಗೂ ಜನಜೀವನದಲ್ಲಿದೆ — ಆದರೆ ಇದು ಎಷ್ಟು ಜನರಿಗೆ ತಿಳಿದಿದೆ?

ಈಗ ನಮ್ಮ ಯುವಕ-ಯುವತಿಯರು ನಮ್ಮ ದೇಶದ ಈ ಅಸಾಮಾನ್ಯ ವಿಚಾರಗಳನ್ನು ಅರಿತು, ಅವುಗಳಿಂದ ಸ್ಫೂರ್ತಿ ಪಡೆದು ತಮ್ಮ ಬದುಕನ್ನು ಹೊಸದಾಗಿ (ಅಂದರೆ 'ಭಾರತೀಯ'ವಾಗಿ) ಕಟ್ಟಿಕೊಳ್ಳಲು ಉಪಯುಕ್ತವಾದ ಕೆಲವು ಕಾರ್ಯಗಳನ್ನು ಇಲ್ಲಿ ಸೂಚಿಸುತ್ತೇವೆ. ಈ ಸೂಚನೆಗಳನ್ನು ಅನುಸರಿಸಿದಲ್ಲಿ ಅವರ ಚಿಂತನೆ, ಜೀವನಕ್ರಮ ಹಾಗೂ ಧೋರಣೆ ಬದಲಾಗವುವು, ಹೆಚ್ಚು ಅರ್ಥಪೂರ್ಣವಾದ ಬದುಕನ್ನು ನಡೆಸಲು ಅವು ಸಹಾಯಕವಾಗುವುವು.

## ೧. ಅರಿವಿಗೆ ಸಮಾನ ಬೇರಿಲ್ಲ

ಪ್ರಪಂಚದಲ್ಲಿ ಎಂತಹ ವ್ಯಾವಹಾರಿಕತೆಯಿರಲಿ, ಎಂತಹ ಆಧುನಿಕತೆಯಿರಲಿ, ಬದುಕಿನಲ್ಲಿ ಜ್ಞಾನಕ್ಕಿರುವ ಮಹತ್ವ ಬೇರೆ ಯಾವ ವಸ್ತುವಿಗೂ ಇಲ್ಲ — ಇದು ಮತ್ತೆ ಮತ್ತೆ ಪ್ರಮಾಣಿತವಾಗಿರುವ ಸಂಗತಿ.

ವಿಜ್ಞಾನ, ತಂತ್ರಜ್ಞಾನ, ವೈದ್ಯವಿಜ್ಞಾನ, ಕಂಪ್ಯೂಟರ್ ತಂತ್ರಜ್ಞಾನ, ಇತಿಹಾಸ, ಪ್ರಾಪಂಚಿಕ ಜ್ಞಾನ, ಈ ಎಲ್ಲ ಕ್ಷೇತ್ರಗಳಲ್ಲಿ ಜ್ಞಾನ ಎಷ್ಟು ಮುಖ್ಯವೆಂಬುದು ಎಲ್ಲರಿಗೂ ತಿಳಿದೇ ಇದೆ.

ಈ ಜ್ಞಾನವನ್ನು ಸಮರ್ಥವಾಗಿಯೂ ಸಮಗ್ರವಾಗಿಯೂ ಹೇಗೆ ಪಡೆಯಬಹುದು?

ಜ್ಞಾನ ಪಡೆಯಲು ಏಕಾಗ್ರತೆ, ನೆನಪಿನ ಶಕ್ತಿ, ಗ್ರಹಣ ಶಕ್ತಿ ಬಹಳ ಮುಖ್ಯ. ಇವುಗಳನ್ನು ಗಳಿಸಲು ಮನಸ್ಸಿನ ಆರೋಗ್ಯ, ಸತತ ಅಭ್ಯಾಸ ಹಾಗೂ ಶಿಸ್ತುಬದ್ಧ ಜೀವನ - ಇವುಗಳು ಅಗತ್ಯ. ಇತ್ತೀಚೆಗೆ ಏಕಾಗ್ರತೆಯ ಬಗ್ಗೆ ರಾಶಿರಾಶಿ ಮಾಹಿತಿಗಳು ವಿವಿಧ ಗ್ರಂಥಗಳಲ್ಲೂ, ಯೂಟ್ಯೂಬ್ ಚಾನೆಲ್‌ಗಳಲ್ಲೂ, ಅಂತರ್ಜಾಲ ತಾಣಗಳಲ್ಲೂ ಲಭ್ಯವಿದೆ. ಆದರೆ ಅವುಗಳಲ್ಲಿ ಎಲ್ಲ ಮಾಹಿತಿಗಳೂ ನಿಮಗೆ ಬೇಕಿಲ್ಲ; ಅನಗತ್ಯವಾದ ಅಥವಾ ತಪ್ಪು ಮಾಹಿತಿ ನೀಡುವ ಹಲವು ಗ್ರಂಥ-ಸೈಟ್-ಚಾನೆಲ್‌ಗಳನ್ನು ಕೈಬಿಡಬೇಕು. ಉಳಿದಿರುವ ಆಕರಗಳನ್ನು ಮಾತ್ರ ಸಂಗ್ರಹಿಸಿ.

ಮಾಹಿತಿ ನೀಡುವ ಆಕರಗಳು ಕೇವಲ ಸಹಾಯಕ ಮಾತ್ರ ಎಂಬುದನ್ನು ಮರೆಯಬೇಡಿ. ಕೊನೆಗೂ ಅವುಗಳ ಸಹಾಯ ಎಂತಹುದು ಎಂದರೆ, ಅವು ನಿಮ್ಮಲ್ಲಿ ಅರಿವನ್ನು ಗಳಿಸಿಕೊಳ್ಳಲು ಬೇಕಾದ ಗುಣಗಳನ್ನು ವರ್ಧಿಸುವಂತೆ ಮಾಡಬೇಕು.

ಹೀಗಾಗಿ, ಆಗಬೇಕಾದ ಬದಲಾವಣೆಗಳು ನಿಮ್ಮೊಳಗೆ ನಡೆಯುವ ಒಂದು ಕ್ರಿಯೆ. ಅದಕ್ಕೆ ನಿಮ್ಮನ್ನು ಒಡ್ಡಿಕೊಳ್ಳಿ. 'ನಾನು ಇರುವುದೇ ಹೀಗೆ. ನಾನು ಮಾಡುವುದೇ ಹೀಗೆ' ಎಂಬ ಹಠಮಾರಿತನ ಸಲ್ಲದು. ಯಾರೂ ಒಂದೇ ರೀತಿ ಇರುವುದಿಲ್ಲ; ಜೀವನದುದ್ದಕ್ಕೂ ಬದಲಾಗುತ್ತಲೇ ಇರುತ್ತಾರೆ. ಕಲಿಕೆಯಂತೂ ಜೀವನಪರ್ಯಂತ ನಡೆಯುತ್ತಲೇ ಇರುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಾರೆ, ''ನಾನು ಬದುಕಿರುವವರೆಗೂ ಕಲಿಯುತ್ತಲೇ ಇರುತ್ತೇನೆ.''

ಆದ್ದರಿಂದ ಹೊಸ ಸಂಗತಿಗಳನ್ನು ಯಾವಾಗಲೂ ಸ್ವೀಕರಿಸಿ. ಇದರಿಂದ ನಿಮ್ಮ ಆಂತರಿಕ ವಿಕಾಸ ನಿಮಗರಿವಿಲ್ಲದೆಯೇ ಉಂಟಾಗುವುದು.

ವಿದ್ಯೆಗೆ ನಮ್ಮ ದೇಶ ಹಾಗೂ ನಮ್ಮ ಸಂಸ್ಕೃತಿ ಕೊಟ್ಟಷ್ಟು ಮಹತ್ವವನ್ನು ಬೇರೆಲ್ಲೂ ಕೊಟ್ಟಿಲ್ಲ. ಆದ್ದರಿಂದ ನಮ್ಮ ದೇಶ ಹಿಂದೊಂದು ಕಾಲದಲ್ಲಿ ಇಡೀ ಪ್ರಪಂಚದಲ್ಲೇ ಎಲ್ಲ ವಿದ್ಯೆಗಳ ಕೇಂದ್ರವಾಗಿತ್ತು. ವ್ಯಾಕರಣ, ಜ್ಯೋತಿಷ, ಆಯುರ್ವೇದ, ಖಗೋಳ, ತತ್ತ್ವಶಾಸ್ತ್ರ, ಅಧ್ಯಾತ್ಮ, ಕಲೆ-ಸಾಹಿತ್ಯ, ಗಣಿತ — ಈ ಎಲ್ಲ ಕ್ಷೇತ್ರಗಳಲ್ಲೂ ನಮ್ಮಲ್ಲಿ ನಡೆದ ಸಂಶೋಧನೆ ಆ ಕಾಲಕ್ಕೆ ಅತಿ ಶ್ರೇಷ್ಠ ಮಟ್ಟದ್ದಾಗಿತ್ತು. ಅಂದಿನ ನಮ್ಮ ಶಾಸ್ತ್ರಜ್ಞರಿಗೆ ಇಲ್ಲದಿದ್ದ ಹಲವು ಅನುಕೂಲತೆಗಳು ಇಂದು ನಮಗಿವೆ. ಆದರೆ ಅಂದಿನವರ ಶಿಸ್ತುಬದ್ಧ ಜೀವನ, ಉದಾತ್ತ ಚಿಂತನೆ, ಬುದ್ಧಿಶಕ್ತಿ ಹಾಗೂ ಪ್ರಯೋಗಶೀಲತೆ ಇಂದು ನಮ್ಮಲ್ಲಿಲ್ಲ. ಇವುಗಳನ್ನು ನಾವು ಮರಳಿ ಗಳಿಸಿದರೆ, ಪ್ರಪಂಚದಲ್ಲಿ ಅದೇ ಸ್ಥಾನವನ್ನು ನಾವು ಮತ್ತೆ ಪಡೆಯಬಹುದು.

## ೨. ಬಾಹ್ಯ ಸಂಪತ್ತಲ್ಲ, ಆಂತರಿಕ ಸುಖ ಮುಖ್ಯ

ನಮ್ಮ ಬದುಕಿನಲ್ಲಿ ನಾವೆಲ್ಲರೂ ಅಂತಿಮವಾಗಿ ಬಯಸುವ ಸಂಗತಿಗಳೆಂದರೆ, ಸುಖ-ಶಾಂತಿ-ನೆಮ್ಮದಿ. ಅವಗಳನ್ನು ಎಲ್ಲಿ ಪಡೆಯಬಹುದು ಎಂಬುದನ್ನು ನಾವು ಸರಿಯಾಗಿ ಅರಿತುಕೊಳ್ಳಬೇಕು. ಇತ್ತೀಚೆಗೆ ಭಾರತೀಯರ ದೃಷ್ಟಿಕೋನ ಬದಲಾಗಿದೆ.

ಹಿಂದಿನ ಕಾಲದಲ್ಲಿ ಭಾರತೀಯರು ಸುಖ, ಶಾಂತಿ, ನೆಮ್ಮದಿ ಇವು ಹಣದಿಂದ ಬರುವುದು ಎಂದು ಭಾವಿಸುತ್ತಿರಲಿಲ್ಲ. ಬದಲಾಗಿ, ಉತ್ತಮ ಮೌಲ್ಯಗಳು, ಸುಸಂಸ್ಕೃತ ಬದುಕು, ಧರ್ಮಕ್ಕೆ ಅನುಸಾರವಾಗಿ ನಡೆಯುವುದು — ಇವುಗಳೇ ಜೀವನಕ್ಕೆ ಅತ್ಯಂತ ಮುಖ್ಯವೆಂದು ತಿಳಿದು, ಅವುಗಳನ್ನೇ ಗಳಿಸಲು ಶಿಕ್ಷಣ ನೀಡುತ್ತಿದ್ದರು.

ಆದರೆ ಇಂದು ಮಗು ಹುಟ್ಟಿದ ಕೂಡಲೇ ಹೆತ್ತವರು ಮಗುವನ್ನು ಡಾಕ್ಟರ್, ಇಂಜಿನಿಯರ್ ಅಥವಾ ಇನ್ನೊಂದು ಮಾಡಬೇಕು ಎಂದು ಯೋಜನೆ ತಯಾರಿಸುತ್ತಾರೆ. 'ಹಣ ಗಳಿಸುವ ಯಂತ್ರ'ವನ್ನಾಗಿ ಮಕ್ಕಳನ್ನು ಬೆಳೆಸಿದರೆ, ಅಂತಹ ಮಕ್ಕಳ ಮನಸ್ಸಿನಲ್ಲಿ ಹಣವಲ್ಲದೆ ಇನ್ನೇನು ತಾನೇ ಇದ್ದೀತು? ಜೀವನದಲ್ಲಿ ಹಣವೆಂಬುದು ಒಂದು ಮಾಧ್ಯಮ, ಒಂದು 'ಜೀವನೋಪಾಯ' ಅಷ್ಟೇ. ಅದೇ ಜೀವನವಲ್ಲ.

ಬದುಕಿಗೆ ಅಗತ್ಯವಾದಷ್ಟು ಹಣ ಗಳಿಸುವುದು ಮುಖ್ಯ, ನಿಜ. ಆದರೆ ಅದಕ್ಕಿಂತ ಬದುಕಿಗೆ ಮುಖ್ಯವಾದದ್ದು ಇನ್ನೂ ಅನೇಕ ವಸ್ತುಗಳಿವೆ. ಅವೇ : ಜ್ಞಾನ, ಮೌಲ್ಯ , ಸಂಸ್ಕೃತಿ ಹಾಗೂ ಸಹಬಾಳ್ವೆ. ಸರಿಯಾದ ತರಬೇತಿಯಲ್ಲದೆ ಇವುಗಳನ್ನು ಬೆಳೆಸುವುದು ಅಸಾಧ್ಯ .

ಎಂತಹ ರೀತಿಯಲ್ಲೇ ಬೆಳೆದಿರಲಿ, ಯುವಕರಿಗೆ ತಮ್ಮ ಮನಸ್ಸನ್ನು, ತಮ್ಮ ಮನೋಭಾವ ಹಾಗೂ ಜೀವನದೃಷ್ಟಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿದೆ. ೧) 'ಜೀವನದಲ್ಲಿ ತನಗೆ ನಿಜವಾಗಿ ಏನು ಬೇಕಾಗಿದೆ? ಹಣವೆ? ಸೊತ್ತು-ಅಧಿಕಾರಗಳೆ? ಅಥವಾ ಶಾಂತಿ, ನೆಮ್ಮದಿಯೆ?' ಎಂದು ನೀವೇ ಪ್ರಶ್ನಿಸಿಕೊಳ್ಳಿ. ೨) ಅನಂತರ ನಿಜವಾದ ಶಾಂತಿ, ನೆಮ್ಮದಿ ಎಲ್ಲಿದೆ ಎಂದು ಅರಿತುಕೊಳ್ಳಿ. ೩) ಬಳಿಕ ಅಂತಹ ಶಾಂತಿಯ, ನೆಮ್ಮದಿಯ ಜೀವನವನ್ನು ನಡೆಸುವುದಕ್ಕೆ ಯಾವ ಜೀವನ ವಿಧಾನ ಅಗತ್ಯ ಎಂಬುದನ್ನು ಕಂಡುಕೊಳ್ಳಿ.

ಹೀಗೆ ಆಂತರಿಕ ಸತ್ವ ನಿಮ್ಮಲ್ಲಿ ವರ್ಧಿಸಿದರೆ, ನೀವು ಹಣದ ಅಥವಾ ಹಣವು ನೀಡುವ ಸುಖಭೋಗಗಳ ಹಿಂದೆ ಹೋಗುವುದಿಲ್ಲ. ನಿಮ್ಮ ದೃಷ್ಟಿ, ನಿಮ್ಮ ಗುರಿ ಹಾಗೂ ಆದರ್ಶ ನಿಮ್ಮ ಅಂತರಂಗದ ಸುಖ, ನೆಮ್ಮದಿ ಆಗಿರುತ್ತದೆ. ಅಸ್ತವ್ಯಸ್ತ ಚಿಂತನೆಯ, ಗೊತ್ತುಗುರಿಯಿಲ್ಲದ ಬದುಕಿನ ಸಂಘರ್ಷ, ಗಲಿಬಿಲಿ ಹಾಗೂ ಅನಾರೋಗ್ಯ ಇನ್ನು ನಿಮ್ಮನ್ನು ಕಾಡಲಾರದು.

### ೩.ಕೊಡುವುದರಲ್ಲೇ ಆನಂದ, ಪಡೆಯುವುದರಲ್ಲಿ ಅಲ್ಲ

ಇದೊಂದು ರೀತಿಯ ಜೀವನಶೈಲಿ. ವ್ಯಾವಹಾರಿಕ ಬದುಕಿನಲ್ಲಿ ಪಳಗಿದವರು ಇದನ್ನು ಒಂದು ರೀತಿ ಅಪ್ರಾಯೋಗಿಕವೆಂದು ಹಳಿಯುತ್ತಾರೆ. ಆದರೆ, ಆಳವಾದ ಚಿಂತನೆ ನಡೆಸಿದಾಗ ತಿಳಿದುಬರುತ್ತದೆ, ಜೀವನದಲ್ಲಿ ನೀವು ಇತರರಿಗೆ ಎಷ್ಟು ಕೊಡುತ್ತೀರೋ ಅದಕ್ಕೆ ನಾಲ್ಕರಷ್ಟು ನಿಮಗೆ ಮರಳಿ ಬರುತ್ತದೆ. ಇದನ್ನು ಭಾರತ ದೇಶ ಬಹಳ ಹಿಂದೆಯೇ ಕಂಡುಕೊಂಡಿತ್ತು. ಆದ್ದರಿಂದ ನಮ್ಮಲ್ಲಿ ದಾನ-ಧರ್ಮಗಳಿಗೆ ಅಷ್ಟೊಂದು ಮಹತ್ವವಿದೆ. ಇದರೊಂದಿಗೆ, ಎಲ್ಲ ಸೇವಾಕಾರ್ಯಗಳೂ ಈ ರೀತಿ 'ಕೊಡುವ' ಮೌಲ್ಯವನ್ನೇ ಅವಲಂಬಿಸಿ ನಡೆಯುತ್ತವೆ.

ಭಾರತೀಯ ಸಂಸ್ಕೃತಿಯಲ್ಲಿ ಪ್ರಪಂಚದ ಎಲ್ಲ ಜೀವಿಗಳ ಹಿತವನ್ನು ಬಯಸುವ ಮೌಲ್ಯಗಳಿವೆ. ಇವುಗಳನ್ನು ಕೇವಲ ಆದರ್ಶವನ್ನಾಗಿ ಕಾಣದೆ, ತಮ್ಮ ಬದುಕಿನುದ್ದಕ್ಕೂ ಇಂತಹ ಮೌಲ್ಯವನ್ನೇ ಆಚರಿಸಿದ ಅನೇಕ ಗಣ್ಯ ವ್ಯಕ್ತಿಗಳು ಆಗಿ ಹೋಗಿದ್ದಾರೆ. ಸೂಕ್ಷ್ಮವಾಗಿ ನೋಡಿದಾಗ, ಅವರು ತಾವು ಎಷ್ಟನ್ನು ಕೊಟ್ಟಿದ್ದಾರೆ ಎಂಬುದನ್ನು ಗಮನಿಸದೆ, ಹೀಗೆ ಕೊಟ್ಟದ್ದರಿಂದ ತಮಗೆ ಎಷ್ಟೊಂದು ಆನಂದ, ತೃಪ್ತಿ , ನೆಮ್ಮದಿ ಲಭಿಸಿತು ಎಂಬುದನ್ನೇ ನೆನೆಯುತ್ತಿರುತ್ತಾರೆ. ಈಗಲೂ ನಮ್ಮ ಸುತ್ತಮುತ್ತಲ ಜನರ ನಡುವೆ ಇಂತಹ ವಿಶೇಷ ವ್ಯಕ್ತಿಗಳನ್ನು ನಾವು ಕಾಣಬಹುದು.

ಯುವಕರು ತಮಗಿಂತ ಹೆಚ್ಚು ದೀರ್ಘಕಾಲ ಜೀವನ ನಡೆಸಿದ ಹಿರಿಯರಿಂದ ಅನೇಕ ಅಂಶಗಳನ್ನು ಕೇಳಿ ತಿಳಿಯುವ ಪ್ರವೃತ್ತಿಯನ್ನು ಕಳಿತೇ ಇಲ್ಲವೆಂಬುದು ದುಃಖದ ವಿಷಯ. ನಮ್ಮ ದೇಶ ಹಿಂದೆಂದೂ ಹೀಗಿರಲಿಲ್ಲ. ಆಧುನಿಕ ಶಿಕ್ಷಣ, ಆಧುನಿಕ ಮನೋಭಾವ ನಮ್ಮ ಸಾಂಪ್ರದಾಯಿಕ ಮೌಲ್ಯಗಳನ್ನು ಸಾರಾಸಗಟಾಗಿ ತಿರಸ್ಕರಿಸಬಾರದು. ನಮ್ಮ ವಿದ್ಯಾಭ್ಯಾಸ ಕ್ರಮವು ನಮ್ಮ ಸಂಸ್ಕೃತಿಯ ಅತ್ಯಮೂಲ್ಯವಾದ ಹಲವು ಮೌಲ್ಯಗಳನ್ನು ಬಾಲ್ಯದಿಂದಲೇ ಶಿಕ್ಷಣದ ಒಂದು ಅಂಗವಾಗಿ ಕಲಿಸಬೇಕು.

ಮೇಲಿನ ಮೂರು ಅಂಶಗಳನ್ನು ಜೀವನದ ಮೂಲ ಸೂತ್ರಗಳನ್ನಾಗಿ ಇರಿಸಿಕೊಂಡು ನಮ್ಮ ಯುವಕರು ಮುಂದುವರಿಯಬೇಕು. ಈ ಮೂರು ದೃಷ್ಟಿಕೋನಗಳು ಅವರ ಬದುಕನ್ನು ಬದಲಾಯಿಸಬಲ್ಲವು. ಮತ್ತೆ ಜೀವನದಲ್ಲಿ ಸ್ಫೂರ್ತಿ, ಪ್ರೇರಣೆ, ಉತ್ಸಾಹಗಳನ್ನು ತುಂಬಬಲ್ಲವು.

*ಸಂಗ್ರಹ: 'ಜ್ಯೋತಿಷ್ಮತಿ'*

## ನಿಜವಾದ ದೇವಾಲಯ

ಜೀವಂತ ದೇವರು ನಿಮ್ಮೊಳಗೇ ಇದ್ದಾನೆ. ಆದರೂ ನೀವು ದೇವಾಲಯಗಳನ್ನು ಕಟ್ಟುತ್ತಾ ಎಲ್ಲಾ ವಿಧದ ಕಲ್ಪನೆಯ ಅವಿವೇಕಗಳನ್ನು ನಂಬುತ್ತೀರಿ. ಪೂಜಾರ್ಹನಾದ ಏಕೈಕ ದೇವರು ಮನುಷ್ಯ ದೇಹದಲ್ಲಿನ ಮನುಷ್ಯಾತ್ಮ. ಪ್ರಾಣಿಗಳೂ ದೇವಾಲಯಗಳೇ ಆದರೂ, ಮಾನವ ಅತ್ಯುನ್ನತ — ದೇವಾಲಯಗಳಲ್ಲಿ ತಾಜ್ ಮಹಲ್.

ನಾನು ಇದರಲ್ಲಿ ಪೂಜೆ ಮಾಡಲಾರೆ ಎಂದಾದರೆ, ಇತರ ಯಾವುದೇ ದೇವಾಲಯದಿಂದ ಪ್ರಯೋಜನವಾಗಲಾರದು. — ಸ್ವಾಮಿ ವಿವೇಕಾನಂದ